ಶ್ರೀ ವಾಟಾಳ್ ನಾಗರಾಜ್ : ಇನ್ನೂ ಕೊಟ್ಟಿಲ್ಲ. ಅವರು ತಮ್ಮ ತೀರ್ಪನ್ನು ಕೊಡುವ ಮುಂಚೆ ನಾವು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ತಾವು ಕಾನೂನನ್ನು, ನಿಯಮಗಳನ್ನು, ಸಂಪ್ರದಯಾಗಳನ್ನು ಪರಿಶೀಲಿಸಿ ಕನ್ಸಿಡರ್ಡ್ ರೂಲಿಂಗ್‌ನ್ನು ಕೊಡಬೇಕು. ಆಲ್ ರೈಟ್. ಈಗ ಆಯಿತು. ಆಗ ಆಗಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಅತ್ತೂ ಕರೆದು ಆರೋಗ್ಯ ಮಂತ್ರಿಗಳನ್ನು ಸದನಕ್ಕೆ ಕರೆಸಿಕೊಳ್ಳಬೇಕಾಯಿತು.

ಉಪಾಧ್ಯಕ್ಷಿಣಿಯವರು : ಈ ರೀತಿ ನಡೆಯುತ್ತಿರುವುದು ಇದು ಮೊದಲನೆಯ ಸಲವಲ್ಲ. ಹಿಂದಿನಿಂದಲೂ ಕೂಡ ನಡೆದುಕೊಂಡು ಬಂದಿದೆ. ಈಗ ಮಾನ್ಯ ಮಂತ್ರಿಗಳು ಬಂದಿರುತ್ತಾರೆ. ಒಂದು ಸ್ಟೇಜ್‌ಗೆ ಬಂದಿರುತ್ತೇವೆ. ಮಾನ್ಯ ಮಂತ್ರಿಗಳು ಈಗ ವಿಧೇಯಕಗಳನ್ನು ಮಂಡಿಸಬೇಕು.

## ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

**1992ರ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ"1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.**

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಹೋಮಿಯೋಪಥಿ ವೃತ್ತಿ ನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

**1992ನೇ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ.**

## ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ 1992ನೇ ಸಾಲಿನ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ